**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 2 ಸಿಡಬ್ಲು : 13

| | | |
|---|---|---|
| ಸಾಕ್ಷಿಯ ಹೆಸರು | : | ಅಣ್ಣಪ್ಪ ಯಲ್ಲಪ್ಪ ವಡ್ರಾಳೆ |
| ತಂದೆಯ ಹೆಸರು | : | ಯಲ್ಲಪ್ಪ ವಡ್ರಾಳೆ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಕಾರ್ಯದರ್ಶಿ |
| ವಾಸ್ತವ್ಯ | : | ಅಳಗವಾಡಿ, ರಾಯಬಾಗ |
| ದಿನಾಂಕ | : | 29-06-2022 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ನಾನು 2015 ರಲ್ಲಿ ಮೊರಬದಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ನನಗೆ ಈ ಪ್ರಕರಣದಲ್ಲಿ ಡಿವಾಯ್. ಎಸ್.ಪಿ. ಚಿಕ್ಕೋಡಿಯವರು ಪತ್ರ ಬರೆದು ಘಟನಾ ಸ್ಥಳ ಉತಾರೆಯನ್ನು ಹಾಗೂ ಪಿರ್ಯಾದಿಯ ಪಾನ ಶಾಪ ಇದ್ದ ಬಗ್ಗೆ ಪ್ರಮಾಣ ಪತ್ರವನ್ನು ಕೇಳಿ ಮನವಿ ಸಲ್ಲಿಸಿದ್ದರು. ಸದರಿ ಮನವಿಯನ್ನು ನಾನು ಈಗ ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ಮನವಿಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 ಎ ಎಂದು ಗುರುತಿಸಲಾಯಿತು. ಕೋರಿಕೆಯಂತೆ ಸದರಿ ಸ್ಥಳಗಳನ್ನು ಪರಿಶೀಲಿಸಿ ಮನವಿಯಲ್ಲಿ ಕೇಳಿದಂತೆ ಘಟನಾ ಸ್ಥಳದ ಉತಾರೆ ಹಾಗೂ ಪಾನಶಾಪ ಇದ್ದ ಬಗ್ಗೆ ಪ್ರಮಾಣ ಪತ್ರವನ್ನು ಒದಗಿಸಿರುತ್ತೇನೆ. ನಾನು ಈಗ ಸದರಿ ಉತಾರೆಯನ್ನು ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದೆ. ಸದರಿ ನಕ್ಷೆಯನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3 ಎ ಎಂದು ಗುರುತಿಸಲಾಯಿತು. ನಾನು ಈಗ ಪಾನ ಶಾಪ ಬಗ್ಗೆ ನೀಡಿದ ಪ್ರಮಾಣ ಪತ್ರವನ್ನು ನೋಡುತ್ತಿದ್ದು, ದರ ಮೇಲೆ ನನ್ನ ಸಹಿ ಇದೆ. ಸದರಿ ಪ್ರಮಾಣ ಪತ್ರವನ್ನು ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿ ನಂ.1, 2, 4 ರಿಂದ 6 ಹಾಗೂ 8 ರಿಂದ 10 ರವರ ಪರ ಶ್ರೀ. ಡಿ ಟಿ ಬಿ ವಕೀಲರಿಂದಃ</u>**

ಮೊರಬ ದೊಡ್ಡ ಊರು ಎಂದರೆ ಸರಿ. ಮೊರಬನ ಜನಸಂಖ್ಯೆ 7000 ಇರುತ್ತದೆ.

ನಾನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ್ದರಿಂದ ಊರಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಪಂಚಾಯಿತಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಲಾಗಿರುತ್ತದೆ ಎಂದರೆ ಸರಿ. ಚಾಸಾಃ 1 ಪ್ರಭಾಕರ ಅಸೋದೆಯವರು ತಮ್ಮ ಪಾನಶಾಪನ್ನು ಹಾಕಲು ಪಂಚಾಯಿತಿಯಿಂದ ಪರವಾಣಿ ಪಡೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಅಂಗಡಿಯ ಮೇಲೆ ತೆರಿಗೆಯನ್ನು ನಾವು ಸಂಗ್ರಹಿಸುತ್ತಿದ್ದೆವು. ಚಾಸಾಃ 1 ಪ್ರಭಾಕರ ಪಾನ ಅಂಗಡಿಯ ಮೇಲೆ ತೆರಿಗೆ ನೀಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನಾನು ಪೋಲೀಸರಿಗೆ ತನಿಖೆಯ ಸಮಯದಲ್ಲಿ ಒದಗಿಸಿಲ್ಲ. ಸದರಿ ತೆರಿಗೆಯ ಪಾವತಿ ರಶೀದಿಗಳನ್ನು ಪೋಲೀಸರಿಗೆ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಚಾಸಾಃ 1 ಪ್ರಭಾಕರ ರವರ ಅಂಗಡಿ ಯಾವ ಸರ್ವೆ ನಂಬರನಲ್ಲಿ ಇತ್ತು ಎಂದು ನಾನು ಉತಾರ ಕೊಟ್ಟಿಲ್ಲ ಎಂದರೆ ಸರಿ. ನಾನು ಪ್ರಮಾಣ ಪತ್ರದಲ್ಲಿ ಚಾಸಾಃ 1 ರವರ ಪಾನ ಅಂಗಡಿ ಇದ್ದ ಬಗ್ಗೆ ಸರ್ವೆ ನಂಬರನ್ನು ನಮೂದಿಸಿಕೊಟ್ಟಿಲ್ಲ ಎಂದರೆ ಸರಿ, ಸಾಕ್ಷಿಯು ಆ ರೀತಿ ಕೊಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಅಂಗಡಿಯ ಉತಾರೆಯನ್ನು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆ ರೀತಿ ಕೊಡಲು ಬರುವುದಿಲ್ಲ ಎಂದು ಹೇಳುತ್ತಾರೆ. ಚಾಸಾಃ 1 ಪ್ರಭಾಕರ ಅಂಗಡಿಯ ಸುತ್ತಮುತ್ತ ಎಷ್ಟು ಅಂಗಡಿಗಳು ಇದ್ದವು ಅಂತ ಹೇಳಲು ಆಗುವುದಿಲ್ಲ, ಚಾಸಾಃ 1 ಪ್ರಭಾಕರ ರವರ ಅಂಗಡಿಯೇ ಇರಲಿಲ್ಲ ನಾನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಪ್ರಮಾಣ ಪತ್ರವನ್ನು ಸೃಷ್ಟಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಅಂಗಡಿಯ ನಂಬರ ಆಗಲಿ ಅಥವಾ ಅದಕ್ಕೆ ಸಂಬಂಧಿಸಿದ ಸರ್ವೆ ನಂಬರನ್ನು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ನಂ.3, 7, 11 ರವರ ಪರ ಶ್ರೀ. ಎಸ ಸಿ ಜೆ ವಕೀಲರಿಂದಃ**

ಪಂಚಾಯಿತಿಯ ವ್ಯಾಪ್ತಿಯಲ್ಲಿ ಯಾರೇ ಅಂಗಡಿಯನ್ನು ಇಟ್ಟು ಮಾರಾಟ ಮಾಡಬೇಕಾದರೆ ಪರವಾಣಿಗೆ ಅವಶ್ಯವಾಗಿರುತ್ತದೆ ಎಂದರೆ ಸರಿ. ಸದರಿಯವರಿಗೆ ಪಂಚಾಯಿತಿಯಿಂದ ಪರವಾಣಿಗೆ ನೀಡಲಾಗುತ್ತದೆ ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ ನಾನು ಎರಡು ವರ್ಷ ಕರ್ತವ್ಯ ನಿರ್ವಹಿಸಿರುತ್ತೇನೆ. ಬೇಕಾಯ್ದೆ ಶೀರ ಯಾರಾದರೂ ಪಂಚಾಯಿತಿ ವ್ಯಾಪ್ತಿಯಲ್ಲಿ ಅಂಗಡಿ ನಡೆಸುತ್ತಿದ್ದರೆ ಅವರಿಗೆ ನೋಟೀಸು ಕೊಟ್ಟು ಸದರಿ

ಅಂಗಡಿಯನ್ನು ಮುಚ್ಚಿಸಬೇಕಾಗುತ್ತದೆ ಎಂದರೆ ಸರಿ. ಚಾಸಾಃ 1 ರವರ ಅಂಗಡಿ ಬೇಕಾಯ್ದೆಶೀರ ಆಗಿ ನಡೆಸಲಾಗುತ್ತಿತ್ತು ಎಂದು ನೋಟೀಸು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

2. ಯಾವುದೇ ಪ್ರಮಾಣ ಪತ್ರ ಕೊಡಬೇಕಾದರೆ ಪಂಚಾಯಿತಿಯ ಲೆಟರ್ ಪ್ಯಾಡನಲ್ಲಿ ಕೊಡಬೇಕಾಗುತ್ತದೆ ಎಂದರೆ ಸರಿ. ಸದರಿ ಲೆಟರನಲ್ಲಿ ಅನುಕ್ರಮ ಸಂಖ್ಯೆ, ದಿನಾಂಕ ಮತ್ತು ಅಂಗಡಿಯ ಸಂಖ್ಯೆ ನಮೂದು ಇರುತ್ತದೆ ಎಂದರೆ ಸರಿ. ನಾನು ಕೊಟ್ಟ ಪ್ರಮಾಣ ಪತ್ರದಲ್ಲಿ ಅನುಕ್ರಮ ಸಂಖ್ಯೆ, ಪರವಾಣಿಗೆ ಸಂಖ್ಯೆ ಇರುವುದಿಲ್ಲ ಎಂದರೆ ಸರಿ.

3. ಪಂಚಾಯಿತಿಯ ವ್ಯಾಪ್ತಿಯಲ್ಲಿ ಇರುವ ಯಾವುದೇ ಮನೆಗಾಗಲೀ ಅಥವಾ ಅಂಗಡಿಗಾಗಲೀ ಉತಾರ ಇರುತ್ತದೆ ಎಂದರೆ ಸರಿ. ಉತಾರ ಇಲ್ಲದೇ ಇದ್ದರೆ ಸದರಿ ಅಂಗಡಿ ಅಥವಾ ಮನೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಕೊಡಬೇಕಾದರೆ ಪಂಚನಾಮೆ ಜರುಗಿಸಬೇಕಾಗುತ್ತದೆ ಎಂದರೆ ಸರಿ. ನಾನು ನಿಪಿಃ 4 ಪ್ರಮಾಣ ಪತ್ರ ಕೊಡುವಾಗ ಸದರಿ ಅಂಗಡಿಯ ಮುಂದೆ ಯಾವುದೇ ಪಂಚನಾಮೆ ಜರುಗಿಸಿಲ್ಲ. ನನಗೆ ಚಾಸಾಃ 1 ರವರ ಅಂಗಡಿಯ ಫೋಟೋ ತೆಗೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

4. ನಿಪಿಃ 4 ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಪೋಲೀಸರ ಹಾಗೂ ಪಿರ್ಯಾದಿಯ ಹೇಳಿಕೆಯಂತೆ ನಾನು ಸೃಷ್ಟಿಸಿದ್ದರಿಂದ ಸದರಿ ಪ್ರಮಾಣ ಪತ್ರದಲ್ಲಿ ಅಂಗಡಿಯ ನಂಬರ, ಪರವಾಣಿಗೆ ನಂಬರ ಬರೆದಿಲ್ಲ ಹಾಗೂ ಫೋಟೋವನ್ನು ಲಗತ್ತಿಸಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಅಂಗಡಿ ಇಲ್ಲದ ಕಾರಣ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿ ನಂ.1, 2, 4 ರಿಂದ 6 ಹಾಗೂ 8 ರಿಂದ 10 ರವರ ಪರ ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಅಶ್ವಿನಿ ವಿಜಯ ಶಿರಿಯಣ್ಣವರ )
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.